ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ.ಸಿ. ನಂಃ980/2018**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಹರೀಶ್ | **ದಿನಾಂಕ** | ಃ **26/03/2024** |
| ತಂದೆ ಹೆಸರು | ಃ ವೆಂಕಟೇಗೌಡ | **ಸಿ ಡಬ್ಲ್ಯೂ** | ಃ **03** |
| ವಯಸ್ಸು | ಃ 33 ವರ್ಷ | **ಪಿ ಡಬ್ಲ್ಯೂ** | ಃ **03** |
| ಉದ್ಯೋಗ | ಃ ಅಬಕಾರಿ ರಕ್ಷಕ | | |
| ವಿಳಾಸ | ಃ ಅರಕಲಗೂಡು ವಲಯ | | |

ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸಪಅ ರವರಿಂದ ಃ-

ನಾನು ಜುಲೈ 2015 ರಿಂದ ದಿಃ04-02-2024 ರವರೆಗೆ ಅರಕಲಗೂಡು ಅಬಕಾರಿ ವಲಯ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ತದನಂತರ ಅರಕಲಗೂಡು ಅಬಕಾರಿ ವಲಯ ಕಚೇರಿಯಲ್ಲಿಯೇ ಅಬಕಾರಿ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು.

ದಿಃ04-05-2018 ರಂದು ಸಂಜೆ ಸುಮಾರು 7.15 ಗಂಟೆಯ ಸಮಯದಲ್ಲಿ ಚಾಸಾ-5 ರವರ ಜೊತೆ ಇಲಾಖಾ ವಾಹನ ಕೆಎ-13-ಜಿ-637 ರ ವಾಹನದಲ್ಲಿ ಸುಳಗೋಡುಸೋಮವಾರ ಆಲೂರು ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ, ಚಾಸಾ-5 ರವರಿಗೆ ಸುಳಗೋಡುಸೋಮವಾರ ಗ್ರಾಮದ ಮಂಜೇಗೌಡ ಬಿನ್ ಮರೀಗೌಡ ಎಂಬಾತನು ತನ್ನ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಅಧರಿಸಿ, ನಾವು ಸುಳಗೋಡುಸೋಮವಾರ ಗ್ರಾಮದ ಸರ್ಕಲ್ ಬಳಿ ಬಂದು, ಅಲ್ಲಿ ನಿಂತಿದ್ದ ಚಾಸಾ-1 ಮತ್ತು 2 ರವರನ್ನು ಕರೆದು ನಮಗೆ ಬಂದಿರುವ ಮಾಹಿತಿಯನ್ನು ಅವರಿಗೆ ತಿಳಿಸಿ, ದಾಳಿಯಸಮಯದಲ್ಲಿ ಪಂಚರಾಗಿ ಬರುವಂತೆ ಕೇಳಿಕೊಂಡ ಮೇರೆಗೆ ಅವರುಗಳು ಒಪ್ಪಿ ನಮ್ಮ ಜೊತೆ ಇಲಾಖಾ ವಾಹನದಲ್ಲಿ ಬಂದಿರುತ್ತಾರೆ. ನಂತರ ನಾವುಗಳು ಮಂಜೇಗೌಡ ಬಿನ್ ಮರೀಗೌಡ ರವರ ಚಿಲ್ಲರೆ ಅಂಗಡಿಯ ಬಳಿ ಹೋದಾಗ, ಅಲ್ಲಿ ಯಾರು ಇರಲಿಲ್ಲ. ನಂತರ ಪಂಚರುಗಳ ಸಮಕ್ಷಮ ಶೋಧನಾ ವಾರೆಂಟ್ ನ್ನು ತಯಾರಿಸಿ, ಸದರಿ ಚಿಲ್ಲರೆ ಅಂಗಡಿಯನ್ನು ಪರಿಶೀಲಿಸಿದಾಗ 90 ಮಿಲಿಯ 12 ಓರಿಜಿನಲ್ ಬಾಯ್ಸ್ ಬ್ರಾಂಡಿಯ ಟೆಟ್ರಾ ಪ್ಯಾಕೇಟ್ ಗಳು ಚಿಲ್ಲರೆ ಅಂಗಡಿಯಲ್ಲಿ ದೊರೆತಿದ್ದವು. ನಂತರ ಟೆಟ್ರಾ ಪ್ಯಾಕೇಟ್ ನನ್ನು ಇಲಾಖಾ ವಶಕ್ಕೆ ಪಡೆದುಕೊಂಡು ದೊರೆತ ಟೆಟ್ರಾ ಪ್ಯಾಕೇಟ್ ಪೈಕಿ 3 ಟೆಟ್ರಾ ಪ್ಯಾಕೇಟ್ ಗಳನ್ನು ಒಂದು ಬಳಿಯ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು, ಅರಗಿನಿಂದ ಕೆಎಸ್

ಸಿ-330 ಎಂದು ಮೊಹರು ಮಾಡಲಾಯಿತು. ನಂತರ ಸ್ಥಳದಲ್ಲಿ ಪಂಚರುಗಳ ಸಹಿಯುಳ್ಳ ಚೀಟಿ ಮತ್ತು ಮಾದರಿ ಸೀಲಿನ ನಕಲನ್ನು ತಯಾರಿಸಲಾಯಿತು. ಸ್ಥಳದಲ್ಲಿ ಸಂಜೆ 7.30 ರಿಂದ 8.30 ಗಂಟೆಯವರೆಗೆ ಇಲಾಖಾ ವಾಹನದ ಮತ್ತು ಟಾರ್ಚ್ ಲೈಟ್ ನ ಸಹಾಯದಿಂದ ಮಹಜರ್ ನ್ನು ಜರುಗಿಸಲಾಯಿತು. ನಂತರ ಆರೋಪಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಮಂಜೇಗೌಡ ಬಿನ್ ಮೇರಿಗೌಡ, ಸುಳಗೋಡುಸೋಮವಾರ ಗ್ರಾಮ, ಅರಕಲಗೂಡು ತಾಲ್ಲೂಕು ಎಂದು ತಿಳಿದು ಬಂದಿರುತ್ತದೆ. ಕೃತ್ಯ ನಡೆದ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಕುಮಾರರವರ ವಾಸದ ಮನೆ ಉತ್ತರಕ್ಕೆ ವೆಂಕಟೇಗೌಡರ ವಾಸದ ಮನೆ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಮಹಜರ್ ನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಸಾಕ್ಷಿಯು ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಿಪಿ-2 ನ್ನು ಸಾಕ್ಷಿಯು ನೋಡಿ ಗುರುತಿಸುತ್ತಿದ್ದಾರೆ. ಎಂ.ಓ-1 ನ್ನು ಸಾಕ್ಷಿಯು ನೋಡಿ ಗುರುತಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ

## ಪಾಟೀ ಸವಾಲುಃ ಶ್ರೀ ಆರ್.ಸಿ. ವಕೀಲರಿಂದ ಆರೋಪಿಯ ಪರವಾಗಿಃ

ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ನಾನು ತನಿಖೆಯ ಸಮಯದಲ್ಲಿ ನೋಡುತ್ತೇನೆ . ಆದರೆ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಈ ಪ್ರಕರಣವನ್ನು ಚಾಸಾ-8 ರವರು ತನಿಖೆ ಮಾಡಿರುತ್ತಾರೆ ಎಂದರೆ ಸರಿ. ಆ ದಿನ ಅರಕಲಗೂಡು, ಆಲೂರು ಸಿದ್ದಾಪುರವಾಗಿ ಸುಳಗೋಡುಸೋಮವಾರ ಮಾರ್ಗವಾಗಿ ಗಸ್ತು ಕರ್ತವ್ಯ ಮಾಡಿರುತ್ತೇವೆ. ನಾವು ಆಲೂರು ಸಿದ್ದಾಪುರ ಮತ್ತು ಸುಳಗೋಡುಸೋಮವಾರ ಮಧ್ಯದಲ್ಲಿ ಇರುವಾಗ ಮಾಹಿತಿ ಬಂದಿರುತ್ತದೆ. ನಮ್ಮ ಇಲಾಖಾ ಜೀಪ್ ನಲ್ಲಿ ನಾನು, ಚಾಸಾ-5 ಮತ್ತು ಇಲಾಖಾ ವಾಹನದ ಚಾಲಕ ಹೋಗಿದ್ದೇವು. ನಮ್ಮ ಇಲಾಖಾ ವಾಹನದಲ್ಲಿ 7 ಜನರು ಕುಳಿತ್ತುಕೊಳ್ಳುವ ವ್ಯವಸ್ಥೆ ಇರುತ್ತದೆ.

ಈ ಪ್ರಕಣದಲ್ಲಿ ಅಮಾನತ್ತ ಪಡಿಸಿಕೊಳ್ಳಲಾಗಿದೆ ಎನ್ನಲಾ ದ ಟೆಟ್ರಾ ಪ್ಯಾಕೇಟ್ ಗಳ ತಯಾರಿಕಾ ದಿನಾಂಕ ಮತ್ತು ಸೀರಿಯಲ್ ನಂಬರ್ ನ್ನು ನನಗೆ ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದೆ ಎನ್ನಲಾ ಟೆಟ್ರಾ ಪ್ಯಾಕೇಟ್ ಗಳ ಸೀರಿಯಲ್ ನಂಬರ್ ಮತ್ತು ತಯಾರಿಕಾ ದಿನಾಂಕವನ್ನು ಕೂಡ ನನಗೆ ನಿಖವಾಗಿ ಹೇಳಲು ಆಗುವುದಿಲ್ಲ. ಅಲ್ಲಿ ಇತ್ತು ಅಂಗಡಿ ಯಾರಿಗೆ ಸೇರಿದ್ದು ಎಂಬ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಚಾಸಾ-8 ರವರು ಸದರಿ ಅಂಗಡಿ ಯಾರಿಗೆ ಸೇರಿದ್ದು ಎಂದು

ದಾಖಲೆಗಳನ್ನು ತೆಗೆಸಿ ನೋಡಿರುತ್ತಾರೆ ಎಂದು ಸಾಕ್ಷಿಯ ಮುಂದುವರೆದು ನುಡಿಯುತ್ತಾರೆ. ಚಾಸಾ-1 ಮತ್ತು 2 ರವರಿಗೆ ಚಾಸಾ-5 ರವರು ಲಿಖಿತವಾಗಿ ಯಾವುದೇ ನೋಟೀಸ್ ನ್ನು ಕೊಟ್ಟಿರುವುದಿಲ್ಲ. ಆ ದಿನ ಚಾಸಾ-1 ಮತ್ತು 2 ರವರು ಆ ಸ್ಥಳದಲ್ಲಿ ಇರಲಿಲ್ಲ ಹಾಗೂ ಸದರಿ ಸ್ಥಳದಲ್ಲಿ ಎಂ.ಓ 1 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ಕೂಡ ನಮ್ಮ ಇಲಾಖಾ ಅಂಕಿಅಂಶಗಳಿಗೋಸ್ಕರ ಆರೋಪಿಯು ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಯಾವುದೇ ಮುದ್ದೆ ಮಾಲನ್ನು ಅಮಾನತ್ತು ಪಡಿಸಿಕೊಳ್ಳದೇ ಇದ್ದರೂ ಕೂಡ ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ತಯಾರಿಸುವ ಸಂದರ್ಭದಲ್ಲಿ ನಾನಗಲೀ ಚಾಸಾ-1 ಮತ್ತು 2 ರವರಾಗಲೀ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಯವರ ಮಾತನುನ್ನು ಕೇಳಿಕೊಂಡು ಆರೋಪಿಯ ವಿರುದ್ದ ಈ ಪ್ರಕರಣವನ್ನು ದಾಖಲಿಸಲಾಗಿದೆ ಮತ್ತು ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ.)

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**( ಚೇತನಾ )**
**ಅಧಿಕ ಜೆಎಂಎಫ್‌ಸಿ, ಅರಕಲಗೂಡು.**